BANGALORE
THE IT CAPITAL OF INDIA

KEONICS
ISO 9001 : 2015

# ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ
# Karnataka State Electronics Development Corporation Limited

(A Government of Karnataka Enterprise)
CIN No. U75112KA1976SGC003055)

ಸಂಖ್ಯೆ: ಕೆಎಸ್ಇಡಿಸಿ/ಇಎಸ್‌ಟಿ/ನೇ.ನೇ/01/2024-25 ದಿನಾಂಕ: 21.02.2025

**ಅಧಿಕೃತ ಜ್ಞಾಪನ**

**ತಾತ್ಕಾಲಿಕ ಆಯ್ಕೆ ಪಟ್ಟಿ (ಹೆಚ್ಚುವರಿ)**

ಕಿಯೋನಿಕ್ಸ್ ಸಂಸ್ಥೆಯು, ಕಲ್ಯಾಣ ಕರ್ನಾಟಕ ಪ್ರದೇಶ (ಸ್ಥಳೀಯ) ವೃಂದದ 06 ವಿವಿಧ ಹುದ್ದೆಗಳಿಗೆ ಮತ್ತು ಉಳಿಕೆ ಮೂಲ ವೃಂದದ 10 ಹುದ್ದೆಗಳಿಗೆ, ನೇರ ನೇಮಕಾತಿ ಸಂಬಂಧ. ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ **ದಿನಾಂಕ:23.06.2023** ರಂದು **ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.15/2022-23 (ಕೆಕೆ)** ಮತ್ತು **ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.15/2022-23 (ಆರ್‌ಪಿಸಿ)** ಅಧಿಸೂಚನೆ ಹೊರಡಿಸಲಾಗಿತ್ತು.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದವರು ಲಿಖಿತ ಪರೀಕ್ಷೆಯನ್ನು ನಡೆಸಿ ಅಭ್ಯರ್ಥಿಗಳು ಪಡೆದುಕೊಂಡ ಅಂಕಪಟ್ಟಿಯ ವಿವರಗಳನ್ನು ಕಿಯೋನಿಕ್ಸ್ ಸಂಸ್ಥೆಗೆ ನೀಡಿರುತ್ತಾರೆ. ಸದರಿ ಅಂಕಪಟ್ಟಿಯನ್ನು ಪರಿಶೀಲಿಸಿ, ಅರ್ಹ ಅಭ್ಯರ್ಥಿಗಳಿಗೆ 1:3 ಅನುಪಾತದಲ್ಲಿ ದಾಖಲಾತಿ ಪರಿಶೀಲನೆಗೆ ಹಾಜರಾಗಲು ಅಭ್ಯರ್ಥಿಗಳಿಗೆ ತಿಳುವಳಿಕೆ ಪತ್ರವನ್ನು ನೀಡಲಾಗಿರುತ್ತದೆ.

ದಾಖಲಾತಿ ಪರಿಶೀಲನೆಗೆ ಹಾಜರಾದ ಅರ್ಹ ಅಭ್ಯರ್ಥಿಗಳ ದಾಖಲಾತಿಗಳನ್ನು ಪರಿಶೀಲಿಸಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು **ದಿನಾಂಕ: 12.02.2025 ರಂದು ಕಿಯೋನಿಕ್ಸ್ ವೆಬ್ ಸೈಟ್ ನಲ್ಲಿ ಪ್ರಕಟಿಸಲಾಗಿರುತ್ತದೆ.**

ಸದರಿ ಆಯ್ಕೆ ಪಟ್ಟಿಯಲ್ಲಿ, ಶ್ರೀ. ಹೊನ್ನಯ್ಯ (ಅರ್ಜಿ ಸಂ: 7007232) ಇವರು ಕೆಳಗೆ ಕಾಣಿಸಿದ 02 ಹುದ್ದೆಗಳಿಗೆ ಆಯ್ಕೆಯಾಗಿರುತ್ತಾರೆ.

1. ಸಹಾಯಕರು (ತಾಂತ್ರಿಕೇತರ) – GM – ಉಳಿಕೆ ಮೂಲ ವೃಂದ
2. ಸಹಾಯಕರು (ತಾಂತ್ರಿಕೇತರ) –ಕಲ್ಯಾಣ ಕರ್ನಾಟಕ ವೃಂದ

ಮುಂದುವರೆದು, ಶ್ರೀ. ಹೊನ್ನಯ್ಯ (ಅರ್ಜಿ ಸಂ: 7007232) ರವರು ಸಹಾಯಕರು (ತಾಂತ್ರಿಕೇತರ) –ಕಲ್ಯಾಣ ಕರ್ನಾಟಕ ವೃಂದದ ಹುದ್ದೆಯನ್ನು ಆಯ್ಕೆಮಾಡಿಕೊಂಡಿರುತ್ತಾರೆ. ಆದ್ದರಿಂದ, ಸಹಾಯಕರು (ತಾಂತ್ರಿಕೇತರ)–GM–ಉಳಿಕೆ ಮೂಲ ವೃಂದದ ಹುದ್ದೆಯು ತೆರವಾಗಿರುತ್ತದೆ.

ಈ ಹಿನ್ನಲೆಯಲ್ಲಿ, ಅರ್ಹತಾ ಪಟ್ಟಿಯಲ್ಲಿ ಶ್ರೀ. ಹೊನ್ನಯ್ಯ ರವರ ನಂತರದ ಸ್ಥಾನದಲ್ಲಿರುವ ಅರ್ಹ ಅಭ್ಯರ್ಥಿಯನ್ನು ಆಯ್ಕೆಮಾಡಬೇಕಾಗಿರುತ್ತದೆ. ಆಯ್ಕೆಯಾದ ಅಭ್ಯರ್ಥಿಯ ವಿವರವನ್ನು ಕೆಳಗೆ ನೀಡಿದೆ.

**(ಉಳಿಕೆ ಮೂಲ ವೃಂದ)**

**ಆಯ್ಕೆಯಾದ ಅಭ್ಯರ್ಥಿಯ ತಾತ್ಕಾಲಿಕ ಆಯ್ಕೆ ಪಟ್ಟಿ (ಹೆಚ್ಚುವರಿ)**

| ಕ್ರ. ಸಂ | ಹುದ್ದೆ | ಹೆಸರು | ನೋಂದಣಿ ಸಂಖ್ಯೆ | ಪ್ರವರ್ಗ/ ಪುರುಷ: ಮಹಿಳೆ | ಗಳಿಸಿದ ಅಂಕ |
|---|---|---|---|---|---|
| 1 | **ಸಹಾಯಕರು (ತಾಂತ್ರಿಕೇತರ)** | **ಶ್ರೀ. ಶಿವಕುಮಾರ್ ಪಾಟೀಲ್** | 7011131 | GM/CAT-1 | 144.5 |

****

**ವಿಶೇಷ ಸೂಚನೆ 1 :**

ದಿನಾಂಕ:12.02.2025 ರಂದು ಪ್ರಕಟಿಸಲಾಗಿದ್ದ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಶ್ರೀ. ಪ್ರಕಾಶ್ (ಅರ್ಜಿ ಸಂ: 7001040) ರವರು ಕೆಳಗೆ ಕಾಣಿಸಿದ ಹುದ್ದೆಗಳಿಗೆ ಆಯ್ಕೆಯಾಗಿರುತ್ತಾರೆ.

1. ಸಹಾಯಕರು (ತಾಂತ್ರಿಕ) – GM – ಉಳಿಕೆ ಮೂಲ ವೃಂದ
2. ಸಹಾಯಕರು (ತಾಂತ್ರಿಕ) – ಕಲ್ಯಾಣ ಕರ್ನಾಟಕ ವೃಂದ

ಮುಂದುವರೆದು, **ಶ್ರೀ. ಪ್ರಕಾಶ್ (ಅರ್ಜಿ ಸಂ: 7001040) ರವರು** ಸಹಾಯಕರು (ತಾಂತ್ರಿಕ) – ಕಲ್ಯಾಣ ಕರ್ನಾಟಕ ವೃಂದದ ಹುದ್ದೆಯನ್ನು ಆಯ್ಕೆಮಾಡಿಕೊಂಡಿರುತ್ತಾರೆ. ಆದ್ದರಿಂದ, ಸಹಾಯಕರು (ತಾಂತ್ರಿಕ)–GM–ಉಳಿಕೆ ಮೂಲ ವೃಂದದ ಹುದ್ದೆಯು ತೆರವಾಗಿರುತ್ತದೆ.

ಈ ತೆರವಾಗಿರುವ ಹುದ್ದೆಗೆ ಅರ್ಹ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಸಂಬಂಧ ಅರ್ಹತಾ ಪಟ್ಟಿಯಲ್ಲಿನ **4ನೇ, 5ನೇ ಮತ್ತು 6ನೇ ಅಭ್ಯರ್ಥಿಗಳಿಗೆ ದಾಖಲಾತಿ ಪರಿಶೀಲನೆಗೆ ಹಾಜರಾಗಲು ತಿಳುವಳಿಕೆ ಪತ್ರ ನೀಡಲಾಗಿರುತ್ತದೆ.**

ದಾಖಲಾತಿ ಪರಿಶೀಲನೆ ಪೂರ್ಣಗೊಂಡ ನಂತರ **ಸಹಾಯಕರು (ತಾಂತ್ರಿಕ)–GM –ಉಳಿಕೆ ಮೂಲ ವೃಂದ**ದ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಯ ಹೆಸರನ್ನು ಕಿಯೋನಿಕ್ಸ್ ವೆಬ್‌ಸೈಟ್ ನಲ್ಲಿ ಪ್ರಕಟಿಸಲಾಗುವುದು.

**ವಿಶೇಷ ಸೂಚನೆ 2 :**

ಸಹಾಯಕ ವ್ಯವಸ್ಥಾಪಕರು (ತಾಂತ್ರಿಕ) - ಕಲ್ಯಾಣ ಕರ್ನಾಟಕ ಹುದ್ದೆಗೆ ಸಂಬಂಧಪಟ್ಟಂತೆ ದಾಖಲಾತಿ ಪರಿಶೀಲನೆಗೆ ಹಾಜರಾಗಲು ಅರ್ಹ ಅಭ್ಯರ್ಥಿಗಳಿಗೆ ತಿಳುವಳಿಕೆ ಪತ್ರ ನೀಡಲಾಗಿರುತ್ತದೆ.

ದಾಖಲಾತಿ ಪರಿಶೀಲನೆ ಪೂರ್ಣಗೊಂಡ ನಂತರ **ಸಹಾಯಕ ವ್ಯವಸ್ಥಾಪಕರು (ತಾಂತ್ರಿಕ) - ಕಲ್ಯಾಣ ಕರ್ನಾಟಕ ವೃಂದ**ದ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಯ ಹೆಸರನ್ನು ಕಿಯೋನಿಕ್ಸ್ ವೆಬ್‌ಸೈಟ್ ನಲ್ಲಿ ಪ್ರಕಟಿಸಲಾಗುವುದು.

(ವ್ಯವಸ್ಥಾಪಕ ನಿರ್ದೇಶಕರಿಂದ ಹಾಗೂ
ಆಯ್ಕೆ ಸಮಿತಿಯಿಂದ ಅನುಮೋದಿಸಲ್ಪಟ್ಟಿದೆ)

Praveen 21/02/2025

( ಪ್ರವೀಣ್.ಕೆ.ಎನ್ )

ನಿರ್ದೇಶಕರು (ನಿರ್ವಹಣೆ) ಹಾಗೂ ಸದಸ್ಯ
ಕಾರ್ಯದರ್ಶಿಗಳು ಆಯ್ಕೆ ಸಮಿತಿ